ಶ್ರೀ ಬಿ.ಎಸ್. ಯಡಿಯೂರಪ್ಪ :– ರಾಜ್ಯದ ಬರಗಾಲ ಪರಿಸ್ಥಿತಿಯನ್ನು ಸುಧಾರಣೆ ಮಾಡುವಂಥ ಯಾವುದೇ ನಿರ್ದಿಷ್ಟವಾದ ಕಾರ್ಯಕ್ರಮದ ಘೋಷಣೆಯನ್ನು ಸರ್ಕಾರ ಮಾಡಿಲ್ಲ. ಸರ್ಕಾರಕ್ಕೆ ಯಾವ ಕಳಕಳಿಯೂ ಇಲ್ಲ.....

ಉಪಾಧ್ಯಕ್ಷರು :– ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಎಲ್ಲರಿಗೂ ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಈ ಅಧಿಕಾರಿಗಳು ಹೋಗಿ ಪ್ರವಾಸ ಮಾಡಿಲ್ಲ, ಮಂತ್ರಿಗಳು ಪ್ರವಾಸ ಮಾಡಿಲ್ಲ. ಈ ಸರ್ಕಾರಕ್ಕೆ ಜನರಿಗೆ ಸಹಾಯ ಮಾಡಬೇಕು ಎಂಬ ಕಳಕಳಿ ಇಲ್ಲ, ಈ ಬಗ್ಗೆ ಯಾವ ಕಾರ್ಯಕ್ರಮವೂ ಇಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:– ನಾವು ಈಗಾಗಲೇ ರಿವೈಸ್ ಮಾಡಿ ಕಳಿಸುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿರ್ದಿಷ್ಟವಾಗಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದಕ್ಕೆ ಯಾವ ಉತ್ತರವೂ ಇಲ್ಲ. ಕಳೆದ ಆರು ವರ್ಷಗಳಿಂದ ಇರುವ ಬರಗಾಲದ ಸಂದರ್ಭದಲ್ಲಿ ಇಷ್ಟು ಹಗುರವಾಗಿ ಸರ್ಕಾರ ತೆಗೆದುಕೊಂಡಿರುವುದು ಇದು ಮೊದಲನೇ ಸಲ. ರಾಜ್ಯದ ಬರಗಾಲ ಪರಿಸ್ಥಿತಿ ಬಗ್ಗೆ ಸರ್ಕಾರಕ್ಕೆ ಕಳಕಳಿ ಇಲ್ಲ. ಈ ಸರ್ಕಾರಕ್ಕೆ....

ಉಪಾಧ್ಯಕ್ಷರು :– ನಾನು ನಿಮ್ಮನ್ನು ಕರೆದಿಲ್ಲ. ನೀವು ಹೇಳಿದ್ದು ಯಾವುದೂ ರೆಕಾರ್ಡ್ ಆಗುವುದಿಲ್ಲ. ಈಗ ಸಮಯ 2 ಗಂಟೆ 45 ನಿಮಿಷ ಆಗುತ್ತಾ ಬಂದಿದೆ...

(ಗೊಂದಲ)

(ಶ್ರೀ ಬಿ.ಎಸ್ ಯಡಿಯೂರಪ್ಪ ಅವರು ಪ್ರತಿಭಟನೆ ವ್ಯಕ್ತಪಡಿಸಿ ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು:– ಈಗ ನಿಯಮ 68ರ ಮೇರೆಗೆ ಮತ್ತೊಂದು ಚರ್ಚೆ ಇದೆ. ಇನ್ನು ಎಷ್ಟು ಹೊತ್ತು ಸಭೆ ಕುಳಿತುಕೊಳ್ಳಬೇಕು? ಖಾಸಗಿ ಕಾರ್ಯಕಲಾಪಗಳು ಬೇರೆ ಎರಡೂವರೆ ಗಂಟೆ ಇದೆ. ಈಗ ಸಭೆ ಎಷ್ಟು ಹೊತ್ತು ಕುಳಿತುಕೊಳ್ಳಬೇಕೆಂಬ ಬಗ್ಗೆ ಸಭೆಯ ಅಭಿಪ್ರಾಯಬೇಕು.

ಶ್ರೀ ವಾಟಾಳ್ ನಾಗರಾಜ್:– ಆರು ಗಂಟೆವರೆಗೆ ಕುಳಿತುಕೊಳ್ಳೋಣ.

ಉಪಾಧ್ಯಕ್ಷರು:– ಎರಡೂವರೆ ಗಂಟೆ ಖಾಸಗಿ ಕಾರ್ಯಕಲಾಪಗಳಿಗೆ ಬೇಕು. ಪೆಟ್ರೋಲ್, ಡೀಸಲ್ ಅಭಾವದ ಬಗ್ಗೆ ಮುಕ್ಕಾಲು ಗಂಟೆ ಹೊತ್ತು ಚರ್ಚೆಮಾಡಿ ನಂತರ ಖಾಸಗಿ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್:– ಸಭೆಯನ್ನು ಈಗ ಅರ್ಧಗಂಟೆ ಮುಂದಕ್ಕೆ ಹಾಕಬಹುದಲ್ಲ?

ಉಪಾಧ್ಯಕ್ಷರು : ಅಡ್ಜರ್ನ್ ಮಾಡಿದರೆ ತಿರುಗಿ ಜನ ಸಿಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ನಾವಂತೂ ಇದ್ದೇ ಇರುತ್ತೇವೆ.

ಉಪಾಧ್ಯಕ್ಷರು:– ಈಗ ಖಾಸಗಿ ಕಾರ್ಯಕಲಾಪಗಳ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ:– ಮೊದಲು ಡೀಸೆಲ್ ಮತ್ತು ಪೆಟ್ರೋಲ್ ಅಭಾವದ ಚರ್ಚೆ ತೆಗೆದುಕೊಳ್ಳಿ. ನಿಮ್ಮದು ಪೆಟ್ರೋಲ್ ಕಾರು, ನಿಮಗೆ ಬೇಕಾಗುವುದಿಲ್ಲ. ಆದರೆ, ನಮ್ಮದು ಡೀಸಲ್ ಕಾರು, ದಯಮಾಡಿ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು.